ಓ.ಎಸ್. 171/2015
ಡಿ. ಡಬ್ಲ್ಯೂ : 03

<u>ದಿನಾಂಕ 09.06.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.</u>

<u>ಪಾಟೀ ಸವಾಲುಃಶ್ರೀ ಎನ್. ಎನ್. ವಕೀಲರಿಂದಃ</u>

1. ಈ ದಾವೆಯನ್ನು ಯಾರು ಯಾರ ವಿರುದ್ಧ, ಯಾವ ಪರಿಹಾರಿಗಳಿಗಾಗಿ ಸಲ್ಲಿಸಿದ್ದಾರೆ ಎಂದು ನಾನು ತಿಳಿದುಕೊಂಡಿದ್ದೇನೆ. ವಾದಿಯ ದಾವೆಗೆ ವಿರುದ್ಧವಾಗಿ ಏನು ತಕರಾರುಗಳನ್ನು ಸಲ್ಲಿಸಿದ್ದೇನೆ ಎಂದು ತಿಳಿದುಕೊಂಡಿದ್ದೇನೆ. ಈ ಪ್ರಮಾಣ ಪತ್ರ ಸಲ್ಲಿಸಲು ನಾನೇ ಮಾಹಿತಿ ನೀಡಿರುತ್ತೇನೆ. ನನ್ನ ಗಂಡನ ಅಣ್ಣ ಸುಧಾಕರವರು ಈ ದಾವೆ ಸಲ್ಲಿಸಿದ್ದಾರೆ. 1 ನೇ ಪ್ರತಿವಾದಿ ಶಾಂತಪ್ಪ ನನಗೆ ಮಾವನಾಗಬೇಕು. ವಾದಿ ಸುಧಕರ ಮತ್ತು 3 ನೇ ಪ್ರತಿವಾದಿ ಲೋಕೇಶ್ ನನ್ನ ಮಾವನಿಗೆ ಮಕ್ಕಳಾಗಬೇಕು. ವಾದಿ ಸುದಾಕರ ಶಾಂತಪ್ಪ ಮತ್ತು ಲೋಕೇಶ್ ರವರ ನಡುವೆ ಇಲ್ಲಿಯವರೆಗೂ ಯಾವುದೇ ನೊಂದಾಯಿತ ವಿಭಾಗ ಪತ್ರ ಆಗಿಲ್ಲ. ಸಾಕ್ಷಿ ಮುಂದುವರೆದು ಲೋಕೇಶ್ ರವರು ಭಾಗ ತೆಗೆದುಕೊಂಡು ಬೇರೆ ಹೋಗಿರುತ್ತಾರೆ ಎಂದು ಸಾಕ್ಷಿ ನುಡಿಯುತ್ತಾರೆ.
2. 3 ನೇ ಪ್ರತಿವಾದಿ ಲೋಕೇಶರವರುದಿನಾಂಕ 31.07.2008 ರಂದು ಹಕ್ಕು ನಿವೃತ್ತಿ ಪತ್ರ ಬರೆದುಕೊಟ್ಟು ಬೇರೆ ಹೋಗಿರುತ್ತಾರೆ ಎಂದರೆ ಸರಿ. ಸ.ನಂ. 228 ರಲ್ಲಿ 2 ಎಕರೆ 36 ಗುಂಟೆ ಇದೆ

ಎಂದರೆ ಸರಿ. ಸ.ನಂ. 144/2 ರಲ್ಲಿ 1 ಎಕರೆ 16 ಗುಂಟೆ ಇದೆ ಎಂದರೆ ಸರಿ.

3. ಸ.ನಂ. 182/1 ರಲ್ಲಿ ಇರುವ 23 ಗುಂಟೆ ಸ್ವತ್ತು ಪಿತ್ರಾರ್ಜಿತ ಸ್ವತ್ತು ಎಂದರೆ ಸಾಕ್ಷಿಯು ನನ್ನ ಮಾವನ ಸ್ವಯಾರ್ಜಿತ ಸ್ವತ್ತು ಎಂದು ನುಡಿಯುತ್ತಾರೆ. ಮೇಲೆ ಹೇಳಿದ ಸ್ವತ್ತುಗಳಲ್ಲಿ ಬಂದ ಆದಾಯದಿಂದ ಇತರೆ ಸ್ವತ್ತುಗಳನ್ನು ಖರೀದಿ ಮಾಡಲಾಗಿದೆ ಎಂದರೆ ಸರಿಯಲ್ಲ.

4. ಈ ದಾವೆಯ 2 ನೇ ಪ್ರತಿವಾದಿ ಶಿವಪ್ರಸಾದ ನನ್ನ ಗಂಡ ಎಂದರೆ ಸರಿ. ಸದರಿ 2 ನೇಪ್ರತಿವವಾದಿಯು ಗೌರಿಬಿದನೂರಿನ ಪ್ರದಾನ ಸಿವಿಲ್ ನ್ಯಾಯಾಲಯದಲ್ಲಿ ಅಸಲು ದಾವೆ 343/2014 ಸಲ್ಲಿಸಿದ್ದಾರೆ ಎಂದರೆ ಸರಿ. ಸದರಿ ದಾವೆಯನ್ನು ಈ ದಾವೆಯ ವಾದಿ ಸುಧಾಕರ 1 ನೇ ಪ್ರತಿವಾದಿ ಶಾಂತಪ್ಪ ಮತ್ತು ಶಶಿಧರ ಎನ್ನುವವರ ವಿರುದ್ದ ಭಾಗ ಕೋರಿ ಸಲ್ಲಿಸಿದ್ದಾರೆ ಎಂದರೆ ಸಾಕ್ಷಿಯು ಅದರ ಬಗ್ಗೆ ಅಷ್ಟುಂದು ಗೊತ್ತಿಲ್ಲ ಎಂದು ನುಡಿಯುತ್ತಾರೆ.

5. ಈ ದಾವೆಯಲಿಲ ಇರುವ ದಾವಾ ಅನುಸೂಚಿ ಸ್ವತ್ತುಗಳ ಮೇಲೆ ಅಲ್ಲಿಯೂ ಸಹ ಇನ್ನೊಂದು ದಾವೆಯನ್ನು ವಿಭಾಗ ಕೋರಿ ದಾವೆ ಸಲ್ಲಿಸಿದ್ದಾರೆ ಎಂದರೆ ನನಗೆ ಗೊತ್ತಿಲ್ಲ ಎಂದು ಸಾಕ್ಷಿ ನುಡಿಯುತ್ತಾರೆ.

6. ದಿನಾಂಕ 18.6.2015 ರಂದು ಈ ದಾವೆಯನ್ನು ಸಲ್ಲಿಸಲಾಗಿದೆ ಎಂದರೆ ನನಗೆ ಗೊತ್ತಿಲ್ಲ. ದಿನಾಂಕ 25.07.2015 ರಲ್ಲಿ 1 ನೇ ಪ್ರತಿವಾದಿಯು ನ್ಯಾಯಾಲಯದ ಸಮನ್ಸ್ ನ್ನು ಪಡೆದು

ವಕೀಲರ ಮೂಲಕ ನ್ಯಾಯಾಲಯಕ್ಕೆ ಹಾಜರಾಗಿದ್ದರು ಎಂದರೆ ನನಗೆ ಗೊತ್ತಿಲ್ಲ. ದಿನಾಂಕ 28.10.2015 ರಂದು 1 ನೇ ಪ್ರತಿವಾದಿ ನೀವು ಮತ್ತು ನಿಮ್ಮ ಗಂಡ ಶಿವಪ್ರಸಾದ ಶಾಮೀಲಾಗಿ ಒಂದುಕ್ರಯ ಪತ್ರ ಮತ್ತು ಒಂದು ದಾನ ಪತ್ರವನ್ನು ಬರೆಯಿಸಿಕೊಂಡಿದ್ದಿರಿ ಎಂದರೆ ಸಾಕ್ಷಿಯು ನಮ್ಮ ಮಾವನವರನ್ನು ನಾವೇ ನೋಡಿಕೊಳ್ಳುತ್ತಿದ್ದೇವು ಆದ ಕಾರಣ ನನ್ನ ಮಾವನವರು ತಾನು ಸ್ವಯಾರ್ಜಿತವಾಗಿ ಗಳಿಸಿದ ಸ್ವತ್ತನ್ನು ಪ್ರೀತಿಯಿಂದ ನನ್ನ ಮಗನ ಹೆಸರಿಗೆ ಕೊಟ್ಟಿದ್ದಾರೆ ಎಂದು ನುಡಿಯುತ್ತಾರೆ.

7. ನೀವು ಅಸೆಸಮೆಂಟ್ ಸಂಖ್ಯೆ 53/2 ಎಂದರೆ 7 ನೇ ಅನುಸೂಚಿ ಸ್ವತ್ತನ್ನು ಮೋಸದಿಂದ 1 ನೇ ಪ್ರತಿವಾದಿಯಿಂದ ಕ್ರಯ ಪತ್ರದ ಮೂಲಕ ಬರೆಯಿಸಿಕೊಂಡಿದ್ದಿರಿ ಎಂದರೆ ಸಾಕ್ಷಿಯು ಸ್ವತ್ತನ್ನು ನೋಡಿದರೆ ಹೇಳಬಲ್ಲೆ ಎಂದು ನುಡಿಯುತ್ತಾರೆ. ಅದೇ ರೀತಿ 8 ನೇ ಅನುಸೂಚಿ ಸ್ವತ್ತನ್ನು ಸಹ ನೀವು ಮೋಸದಿಂದ ದಾನ ಪತ್ರದ ಮೂಲಕ ದಾನ ಪತ್ರದ ಮೂಲಕ ಪಡೆದುಕೊಂಡಿದ್ದಿರಿ ಎಂದರೆ ಸಾಕ್ಷಿಯು ನನ್ನ ಮಾವನವರ ಪ್ರೀತಿಯಿಂದ ದಾನ ಪತ್ರ ಬರೆದುಕೊಟ್ಟಿರುತ್ತಾರೆ ಎಂದು ನುಡಿಯುತ್ತಾರೆ.

8. ದಾವಾ ಅನುಸೂಚಿ ಸ್ವತ್ತು ಸಂಖ್ಯೆ 7 ಮತ್ತು 8 ನ್ನು ಒಟ್ಟು ಕುಟುಂಬದ ಆದಾಯದಿಂದ ಖರೀದಿ ಮಾಡಿರುವುದರಿಂದ ಈ ದಾವೆಯ ಎಲ್ಲಾ ಪಕ್ಷಗಾರರಿಗೂ ಸಹ ಸದರಿ ಸ್ವತ್ತುಗಳ ಮೇಲೆ ಹಕ್ಕು ಮತ್ತು ಸ್ವಾಧೀನ ಅನುಭವ ಇದೆ ಎಂದರೆ ಸಾಕ್ಷಿಯು ಸುಳ್ಳು ಎಂದು ನುಡಿಯುತ್ತಾರೆ. ವಾದಿಗೆ ಬರಬೇಕಾಗಿರುವ

ಭಾಗಾಂಶವನ್ನು ಲಪಟಾಯಿಸಬೇಕು ಎನ್ನುವ ಉದ್ದೇಶದಿಂದ 1 ನೇ ಪ್ರತಿವಾದಿಯೊಂದಿಗೆ ಶಾಮೀಲಾಗಿ ಸುಳ್ಳು ದಾಖಲೆಗಳನ್ನು ಸೃಷ್ಟಿ ಮಾಡಿಕೊಂಡಿದ್ದಿರಿ ಎಂದರೆ ಸಾಕ್ಷಿ ಸುಳ್ಳು ಎಂದು ನುಡಿಯುತ್ತಾರೆ.

ಮುಂದುವರೆದ ಪಾಟೀ ಸವಾಲಿಗಾಗಿ ಮುಂದೂಡಲಾಯಿತು.

ಓದಿ ಹೇಳಿ ಕೇಳಿ ಸರಿ ಇದೆ

ಸಹಿ/-
ಹಿರಿಯ ಶ್ರೇಣಿ ನ್ಯಾಯಾಧೀಶರು
ಗೌರಿಬಿದನೂರು.